**ಸಾಕ್ಷಿಗೆ ದಿನಾಂಕಃ 17.01.2023 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರಃ ಶ್ರೀ.ಕೆ ಆರ್ ಎಸ್ ವಕೀಲರಿಂದ :</u>**

ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಈಗಾಗಲೇ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಸತ್ಯವಾಗಿದೆಯೆಂದು ಪ್ರಮಾಣೀಕರಿಸುತ್ತೇನೆ. ಪ್ರಮಾಣಪತ್ರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಮುಂದುವರೆದು ನನ್ನ ವಾದ ಪತ್ರಕ್ಕೆ ಪೂರಕವಾಗುವಂತೆ ಕೆಳಕಂಡ ದಾಖಲೆಗಳನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ.

1. ದಿನಾಂಕಃ07.04.1997 ರ ಮರಣ ಶಾಸನ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ಸದರಿ ಮರಣ ಶಾಸನ ಪತ್ರವನ್ನು ನನ್ನ ಅಜ್ಜಿ ಕುಲುಸುಂಬಿ ರವರು ದಾವಾ ಆಸ್ತಿಗೆ ಸಂಬಂಧಿಸಿ ನಮ್ಮ ತಂದೆಗೆ, ನನ್ನ ಚಿಕ್ಕಪ್ಪ ಮಹಮ್ಮದ್ ಮಸ್ತಾನ್ ಮತ್ತು ನನ್ನ ದೊಡ್ಡಪ್ಪ ಇಬ್ರಾಹಿಂ ಸಾಹೇಬ್ ಗೆ ಬರೆದುಕೊಟ್ಟಿರುತ್ತಾರೆ.
2. ವಂಶವೃಕ್ಷದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10
3. ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ನನ್ನ ಪರವಾಗಿ ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**<u>ಪಾಟೀಸವಾಲು : ಪ್ರತಿವಾದಿ ಪರಃ ಶ್ರೀ. ವಿ ಆರ್ ಎನ್ ವಕೀಲರಿಂದ :</u>**

ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ದಿನಾಂಕಃ 17.01.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**